ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: 07.03.2014

# ಕೋಲಾರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಮುನ್ಸೂಚನೆ (ದಿನಾಂಕ 08.03.14 –12.03.14 ವರೆಗೆ)

| | 08.03.14 | 09.03.14 | 10.03.14 | 1103.14 | 12.03.14 |
|---|---|---|---|---|---|
| ಮಳೆ (ಮಿ ಮಿ) | 6 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 30 | 30 | 30 | 30 | 31 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 19 | 20 | 19 | 20 | 19 |
| ಮೋಡ ( ಪ್ರಮಾಣ) | 5 | 4 | 6 | 3 | 1 |
| ಅರ್ದ್ರತೆ ೭.೨೦ ಬೆ (ಶೇ) | 87 | 82 | 75 | 74 | 69 |
| ಅರ್ದ್ರತೆ ೨.೨೦ ಮ (ಶೇ) | 39 | 31 | 29 | 32 | 23 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 4 | 4 | 3 | 4 | 3 |
| ಗಾಳಿಯ ದಿಕ್ಕು ( ಡಿಗ್ರಿ) | 120 | 150 | 140 | 140 | 150 |

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ನಾಲ್ಕು ದಿನಗಳಲ್ಲಿ ಆಕಾಶದಲ್ಲಿ ಅಗಿಂದಾಗ್ಗೆ ಮೋಡಕವಿದ ವಾತವರಣವಿದ್ದು ಮತ್ತು ಉಷ್ಣಾಂಶದ ಏರಿಳಿತದಿಂದ ಅಲ್ಲಲ್ಲಿ ಚದುರಿದಂತೆ ಮಳೆಯಾಗುವ ಸಂಭವವಿರುತ್ತದೆ. ದಿನದ ಗರಿಷ್ಠ ಉಷ್ಣಾಂಶ 30-31.0$^{o}$C ಮತ್ತು ಕನಿಷ್ಠ 19.0-20.0 $^{o}$C ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 67-87 % ಇದ್ದು, ಮಧ್ಯಾಹ್ನ 23-39 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 3-4 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂದಿನ ನಾಲ್ಕೈದು ದಿನಗಳಲ್ಲಿ ಚದುರಿದಂತೆ ಅಕಾಲಿಕ ಮಳೆಯಾಗುವ ಸಂಭವವಿರುವುದರಿಂದ ರಾಗಿ ಮತ್ತುಜೋಳವನ್ನು ಒಣಗಿಸಿಸುವುದು, ತೂರುವುದು ಮತ್ತು ಸ್ವಚ್ಚಗೊಳಿಸುವುದನ್ನು ಕೆಲ ದಿನಗಳ ಕಾಲ ಮುಂದೂಡಿವುದು ಸೂಕ್ತ.
- ದ್ರಾಕ್ಷಿ : ಬೂಜು ರೋಗದ ಲಕ್ಷಣ ಕಂಡುಬಂದರೆ ಡೈಮೆಥೋಮಾರ್ಫ್ (೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅಥವಾ ಅಜಾಕ್ಸಿಸ್ಟ್ರಾಬಿನ್ (ಅಮಿಸ್ಟಾರ್) (೦.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅಥವಾ ರಿಡೋಮಿಲ್ (೨ ಗ್ರಾಂ ಪ್ರತಿ ಲೀ. ನೀರಿಗೆ) ಬೆರೆಸಿ ಸಿಂಪಡಿಸುವುದು ಸೂಕ್ತ.
- ಮಾವು:ವಾತಾವರಣದಲ್ಲಿ ಬೆಳಗಿನ ಸಮಯದಲ್ಲಿ ಕಡಿಮೆ ಉಷ್ಣಾಂಶ ಮತ್ತು ಹೆಚ್ಚಿನ ಆರ್ದ್ರತೆ ಇರುವುದರಿಂದ ಹೊ ಬಿಡುವ ಹಂತದಲ್ಲಿ ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ ಕಾರ್ಬರಿಲ್ ೪.೦ ಗ್ರಾಂ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ಜಿಗಿ ಹುಳು ಕೀಟದ ನಿಯಂತ್ರಣಕ್ಕೆ ಕಾನ್ಫಿಡಾರ್ (Confidor) 0.5 ಮಿ.ಲಿ ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸುವುದು.
- ಜಾನುವಾರು ಮತ್ತು ರೇಷ್ಮೆ ಹಾಗೂ ಕೋಳಿ ಸಾಕಣೆ : ರೇಷ್ಮೆ ಹಾಗೂ ಕೋಳಿ ಸಾಕಣೆಯ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ಜಾನುವಾರುಗಳಿಗೆ ಕಾಲುಬಾಯಿ ಜ್ವರಕ್ಕೆ ಲಸಿಕೆಯನ್ನು ಹಾಕಿಸಿ.
  ಹಾಲು ಕರೆಯುವ ಹಸುಗಳಿಗೆ ಮೇವಿನ ಜೊತೆಗೆ ಖನಿಜಯುಕ್ತ ಲವಣಾಂಶವನ್ನು (ಕ್ಯಾಲ್ಸಿಯಂ) ಪಶು ಆಹಾರದ ಜೊತೆ ಸೇರಿಸಿ ಕೊಡಬೇಕು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು